**ಕರ್ನಾಟಕ ಮುಕ್ತ ಶಾಲೆಗಳ ಪರೀಕ್ಷೆ, ಮಾರ್ಚ್ / ಏಪ್ರಿಲ್, 2019**

**Karnataka Open School Examination, March / April, 2019**

# ಪ್ರಥಮ ಭಾಷೆ — ಕನ್ನಡ

# FIRST LANGUAGE — KANNADA

**(ಹೊಸ ಪಠ್ಯಕ್ರಮ)**

**(New Syllabus)**

ದಿನಾಂಕ : 21. 03. 2019 ]

Date : 21. 03. 2019 ]

ಸಮಯ : ಮಧ್ಯಾಹ್ನ 2.00 ರಿಂದ 5.00 ರವರೆಗೆ ] [ ಗರಿಷ್ಠ ಅಂಕಗಳು : 125

Time : 2.00 P.M. to 5.00 P.M. ] [ Maximum Marks : 125

***ಸೂಚನೆಗಳು :*** i) ಎಲ್ಲಾ ಪ್ರಶ್ನೆಗಳ ಉತ್ತರಗಳನ್ನು ಉತ್ತರ ಪತ್ರಿಕೆಯಲ್ಲಿಯೇ ಬರೆಯಿರಿ.

ii) ಪ್ರಶ್ನೆ ಮತ್ತು ಉಪ–ಪ್ರಶ್ನೆಗಳ ಸಂಖ್ಯೆಯನ್ನು ಸರಿಯಾಗಿ ಬರೆಯಿರಿ.

I. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ *ಒಂದೊಂದು* ಪದದಲ್ಲಿ ಉತ್ತರಿಸಿ :** 6 × 1 = 6

1) ನಾವೆಲ್ಲರೂ ಒಂದೇ ಜಾತಿ, ಒಂದೇ ಮತ, ಒಂದೇ ಕುಲ. ನಾವು ಯಾರು ?

2) ಊರ ಬೀದಿಯನ್ನು ಬೆಳಗಿರುವುದು ಯಾವುದು ?

3) ನುಡಿದರೆ ಯಾವ ಹಾರದಂತಿರಬೇಕು ?

4) ರಾಜನ ಮಗನ ಕಿವಿಯು ಯಾವುದರದ್ದಾಗಿತ್ತು ?

5) ಕೆರೆಯ ಮೂಲೆಯಲ್ಲಿ ಬಾಗಿದ್ದ ರೆಂಬೆಯಲ್ಲಿ ಯಾವ ಹಕ್ಕಿಗಳು ಗೂಡು ಕಟ್ಟಿದ್ದವು ?

6) ಅಶೋಕವನದಲ್ಲಿ ಯಾವ ದೇವಾಲಯವಿತ್ತು ?

II. **ಈ ಕೆಳಗೆ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿ :** 6 × 1 = 6

1) ಕನ್ನಡ ವರ್ಣಮಾಲೆಯಲ್ಲಿರುವ ಸ್ವರಗಳ ಸಂಖ್ಯೆ ..................... .

2) ನನ್ನ ಹರಣ ನಿನಗೆ ಶರಣ ಸಕಲ ..................... .

3) ದಿನವನಿಲ್ಲಿ ಈನೆಲಕ್ಕೆ ಎಳೆದು ಸೆಳೆದು ತರುವೆವು. ನಾವು ಸದಾ ..................... .

4) ಏನು ಕಂಗಳ ಚೆಲುವು ಹೊಳಪು! ನಿಜದ ಹೆಣ್ಣೋ ..................... .

5) ತರಗತಿಯಲ್ಲಿ ಚೆನ್ನಾಗಿ ಹಾಡುತ್ತಿದ್ದವಳು ..................... .

6) ದೆಸೆಮುಖದವನು ನನಕಂದ ಆಡಿದರ ಹಸನವ್ವ ನನ್ನ ..................... .

III. **ಈ ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದವನ್ನು ಆರಿಸಿ, ಬರೆಯಿರಿ :** 6 × 1 = 6

1) ನಾವೆಲ್ಲರೂ ಒಂದೇ ಜಾತಿ, ಕೊನೆಯ ಹಾಡು, ನಮ್ಮ ಮೇಷ್ಟ್ರು, ಹೆಣ್ಣೊಬ್ಬಳ ಕನಸು.

2) ಕರ್ವಾಲೋ, ಚಿದಂಬರ ರಹಸ್ಯ, ನಂಟರು, ನಿಗೂಢ ಮನುಷ್ಯರು.

3) ಸುರೇಂದ್ರ, ಚಂದ್ರೋದಯ, ಮಹರ್ಷಿ, ಏಕೈಕ.

4) ಕೋಕಿಲಾ, ಆಕರ, ಗೊಟ್ಟಿ, ತ್ಯಾಗ.

5) ನೋಡುನೋಡು, ಆಗಾಗ, ಮನೆಮಠ, ಕೇಳುಕೇಳು.

6) ಹಾಲುಜೇನು, ಕಾಡುಮೇಡು, ಕಸಕಡ್ಡಿ, ಒಮ್ಮೊಮ್ಮೆ.

IV. **ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ, ಮೂರನಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ :** 6 × 1 = 6

1) ಕಂದಪದ್ಯ : ಮಾತ್ರಾಗಣ :: ವೃತ್ತಗಳು : ..................... .

2) ನೀನು : ನೀವು :: ಹುಡುಗಿ : ..................... .

3) ಕೀರ್ತನೆಗಳು : ದಾಸರು :: ವಚನಗಳು : ..................... .

4) ಅರುಣೋದಯ : ಗುಣ ಸಂಧಿ :: ಗತ್ಯಂತರ : ..................... .

5) ದೇವಮನೆ : ತತ್ಪುರುಷ ಸಮಾಸ :: ಕೈಹಿಡಿ : ..................... .

6) ಸತಿ : ಹೆಂಡತಿ :: ಪೃಥ್ವಿ : ..................... .

V. **ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಕ್ರಮಾಕ್ಷರದೊಂದಿಗೆ ಆರಿಸಿ, ಬರೆಯಿರಿ :** 5 × 1 = 5

1) ನಾವೆಲ್ಲರೂ ಒಂದೇ ಮಹಾಪ್ರೇಮಾಗ್ನಿಯ

ಅ) ಬಣ್ಣದಣ್ಣ ತಮ್ಮರು

ಆ) ಎದೆಯಾಸೆಯ ಕುಡಿಗಳು

ಇ) ಸತ್ಯಕಾಮರು

ಈ) ಹೋಮಾಗ್ನಿಯ ಕಿಡಿಗಳು

2) ಚೆನ್ನಮ್ಮ ಕನ್ನಡಿಗರನ್ನು ಸಂಬೋಧಿಸಿದ್ದು

ಅ) ಸಿಂಹದ ಮರಿಗಳು

ಆ) ಕುನ್ನಿ ಮರಿಗಳು

ಇ) ಆನೆ ಮರಿಗಳು

ಈ) ಬೆಕ್ಕಿನ ಮರಿಗಳು

3) ತಾಯಿ ತನ್ನ ಕಂದನ ಅಂಗಾಲನ್ನು ತೊಳೆಯುತ್ತೇನೆ ಎಂದಿರುವುದು

ಅ) ಹೊಳೆ ನೀರಿನಿಂದ

ಆ) ತೆಂಗಿನಕಾಯಿ ತಿಳಿನೀರಿನಿಂದ

ಇ) ಕೆರೆ ನೀರಿನಿಂದ

ಈ) ತೊರೆ ನೀರಿನಿಂದ

4) ಮರದ ಕೊಂಬೆಗೆ ಕುಟುಕುತ್ತಿದ್ದದ್ದು

ಅ) ಕೊಕ್ಕರೆ

ಆ) ಮೀನು

ಇ) ಮರ ಕುಟಿಕ

ಈ) ಕಪ್ಪೆ

5) ಘೋರವಾದ ಯುದ್ಧ ನಡೆಯುವುದು

ಅ) ಮಂಡೋದರಿ ಮತ್ತು ಸೀತೆಗೆ

ಆ) ರಾವಣ ಮತ್ತು ರಾಮನಿಗೆ

ಇ) ರಾವಣ ಮತ್ತು ವಿಭೀಷಣನಿಗೆ

ಈ) ಆಂಜನೇಯ ಮತ್ತು ವಿಭೀಷಣನಿಗೆ

VI. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ :** $6 \times 1 = 6$

1) ಸುಖದ ನೆಪದಲ್ಲಿ ಮಾನವ ಏನನ್ನು ಅನುಭವಿಸುತ್ತಾನೆ ?

2) 'ನಾವೆಲ್ಲರೂ ಒಂದೇ ಜಾತಿ' ಪದ್ಯದಲ್ಲಿ ಕವಿ ಯಾವ ಗುಹೆಗಳಿಂದ ಹೊರ ಬನ್ನಿರಿ ಎಂದಿದ್ದಾರೆ ?

3) ಕವಿಯು ಜಗವನ್ನೇ ಬೆಲೆಕಟ್ಟಿದ್ದು ಯಾವುದಕ್ಕೆ ?

4) ಕವಯಿತ್ರಿ ತನ್ನ ಕವಿತೆಗೆ ಎಂಥ ಹೃದಯವಿದೆ ಎಂದಿದ್ದಾರೆ ?

5) ಹಸುಮಕ್ಕಳಾಡಿದರೆ ಯಾವುದು ಹಸನಾಗುತ್ತದೆ ?

6) 'ದಾನಚಿಂತಾಮಣಿ' ಪದ್ಯದಲ್ಲಿ ಕವಿ ರನ್ನನು ಯಾರ ಕೀರ್ತಿಯನ್ನು ಬಣ್ಣಿಸಿದ್ದಾನೆ ?

VII. a) **ಈ ಕೆಳಗಿನ ಪದಗಳನ್ನು ಬಿಡಿಸಿ ಬರೆದು, ಸಂಧಿಯ ಹೆಸರನ್ನು ಬರೆಯಿರಿ :** $2 \times 1 = 2$

i) ಮಳೆಗಾಲ

ii) ದೇವಾಲಯ

b) **ಈ ಕೆಳಗಿನ ಪದಗಳನ್ನು ವಿಗ್ರಹವಾಕ್ಯ ಮಾಡಿ, ಬರೆದು ಸಮಾಸದ ಹೆಸರನ್ನು ಬರೆಯಿರಿ :** $2 \times 1 = 2$

i) ಹೆಮ್ಮರ

ii) ಆಮನೆ

c) **ಈ ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ :** $2 \times 1 = 2$

i) ಕೌತುಕ

ii) ನೆರೆ

d) **ಈ ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ :** $2 \times 1 = 2$

i) ಅಹಿಂಸೆ

ii) ಆಸೆ

e) **ಈ ಕೆಳಗಿನ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ :** $2 \times 1 = 2$

i) ಪ್ರತಿಮೆ

ii) ಸಮಯ ಪ್ರಜ್ಞೆ

VIII. **ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ :** 5 × 1 = 5

ಜಗತ್ತಿನ ಎಲ್ಲಾ ಪ್ರಸಿದ್ಧರಿಗೂ ಅಮೆರಿಕದಲ್ಲಿ ಬಂದು 'ಸೈ' ಎನಿಸಿಕೊಳ್ಳಬೇಕು ಎಂಬ ಹಂಬಲ. ಅಮೆರಿಕದ ಜನತೆ ಯಾವುದಕ್ಕೂ ಪ್ರೋತ್ಸಾಹ ನೀಡುತ್ತಾರೆ. ಈ ವರ್ಷ ಅಲ್ಲಿಗೆ ಮಾಸ್ಕೋ ಸರ್ಕಸ್ ಬಂತು. ಕೆನಡಕ್ಕೂ ಬಂತು. ಆಗ ನಾವು ಎಡ್ಮಂಡ್ ನಗರದಲ್ಲಿದ್ದೆವು. ಮಾಸ್ಕೋ ಸರ್ಕಸ್ ಅತ್ಯಂತ ಆಕರ್ಷಣೀಯ ಪ್ರದರ್ಶನ. ಇದು ನಡೆಯುವುದು ಮೂರು ಗಂಟೆಗಳ ಹೊತ್ತು. ಅದರ ವೈವಿಧ್ಯ, ಸೊಬಗು, ರೋಮಾಂಚನಕಾರಿ ಪರಿಣಾಮ ಅಂತರಿಕ್ಷದಲ್ಲಿ ನಡೆಯುವ ಕ್ರೀಡಾಪಟುಗಳ ನಂಬುವುದಕ್ಕೇ ಸಾಧ್ಯವಿಲ್ಲದ ಚುರುಕಿನ ವ್ಯಾಯಾಮ ಸಾಧನಗಳು. ಇವುಗಳನ್ನು ಮಾತಿನಿಂದ ವರ್ಣಿಸುವುದು ಸಾಧ್ಯವಿಲ್ಲ. ಇದು ನಡೆದುದು ಎಡ್ಮಿಂಟನ್ ಕ್ರೀಡಾಂಗಣದಲ್ಲಿ. ಮಧ್ಯದಲ್ಲಿ ಸರ್ಕಸ್ ಪ್ರಾಣಿಗಳು, ಪ್ರದರ್ಶನಗಳ ಅಂಗಳ, ಸುತ್ತ ಒಂದರ ಮೇಲೆ ಒಂದರಂತೆ ಮೂರು ಗ್ಯಾಲರಿಗಳು, ಮೇಲೆ ಸೂರು. ಕಟ್ಟಡದ ಎತ್ತರವೇ ನೂರಾರು ಅಡಿಗಳಿವೆ. ಯಾವ ಮೂಲೆಯಲ್ಲಿ ಕುಳಿತು ನೋಡಿದರೂ ಪ್ರದರ್ಶನದ ಎಲ್ಲಾ ಭಾಗಗಳೂ ಕಾಣುತ್ತವೆ. ಒಂದು ತಿಂಗಳ ಕಾಲ ಅಮೆರಿಕ, ಕೆನಡಗಳಲ್ಲಿ ಎಲ್ಲಿ ನೋಡಿದರೂ ಮಾಸ್ಕೋ ಸರ್ಕಸ್ಸಿನ ಮಾತೇ. ನಾವು ಆಟಗಾರರ ಸಮೀಪದ ಅತಿ ಮೊದಲ ಸ್ಥಳದಲ್ಲಿಯೇ ಕುಳಿತೆವು. ಗ್ಯಾಲರಿಗಳಲ್ಲಿ ಕುಳಿತಿದ್ದ ಅಸಂಖ್ಯಾತ ಜನಸ್ತೋಮ ಭೂಮಿಯಿಂದ ಆಕಾಶದವರೆಗೆ ಜನಗಳೇ ಇದ್ದಂತೆ ತೋರಿತು. ಎಲ್ಲರಿಗೂ ಏನೋ ಒಂದು ವಿಧವಾದ ಸಂಭ್ರಮ. ರಷ್ಯಾದವರು ಏನು ಮಾಡಿದರೂ ತುಂಬಾ ಚೆನ್ನಾಗಿ ಮಾಡುತ್ತಾರೆ.

***ಪ್ರಶ್ನೆಗಳು :***

1) ಮಾಸ್ಕೋ ಸರ್ಕಸ್ ನಡೆದದ್ದು ಯಾವ ಕ್ರೀಡಾಂಗಣದಲ್ಲಿ ?

2) ನಿರೂಪಕರು ಸರ್ಕಸ್ ನೋಡಲು ಎಲ್ಲಿ ಕುಳಿತರು ?

3) ಜಗತ್ತಿನ ಪ್ರಸಿದ್ಧರಿಗೆ ಎಲ್ಲಿ 'ಸೈ' ಎನಿಸಿಕೊಳ್ಳಬೇಕೆಂಬ ಹಂಬಲವಿರುತ್ತದೆ ?

4) ಮಾಸ್ಕೋ ಸರ್ಕಸ್ ಮಾಡಿದವರು ಯಾವ ದೇಶದವರು ?

5) ಸರ್ಕಸ್ ನೋಡಲು ಸೇರಿದ್ದ ಜನಸೋಮ ಹೇಗೆ ತೋರಿತು ?

IX. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎರಡು ವಾಕ್ಯಗಳಲ್ಲಿ ಉತ್ತರಿಸಿ :** 10 × 2 = 20

1) ಜನನ ಮರಣಗಳ ಬಗ್ಗೆ ಕವಿ ಏನು ಹೇಳಿದ್ದಾರೆ ?

2) ಕವಿಯು ಕಂಡ ಚೆಲುವೆಯ ರೂಪು ಹೇಗಿದೆ ?

3) ಮೇಷ್ಟ್ರು ಶಾಲೆಗೆ ಹೊರಡಲು ಏಕೆ ತಡವಾಯಿತು ?

4) ನನ್ನೂರಿನಲ್ಲಿ ಯಾವ ಯಾವ ವಾಹನಗಳು ಓಡಾಡುತ್ತಿವೆ ಎಂದು ಲೇಖಕರು ಹೇಳಿದ್ದಾರೆ ?

5) ಅನುಗಾಲವೂ ಯಾವುದರ ಚಿಂತೆ ಎಂದು ಪುರಂದರದಾಸರು ಹೇಳಿದ್ದಾರೆ ?

6) ಮರಣವೇ ಮಹಾನವಮಿ ಎಂದು ಲೇಖಕರು ಹೇಗೆ ಹೇಳಿದ್ದಾರೆ ?

7) ಕ್ಷೌರಿಕನು ಊರು ಬಿಡಲು ನಿರ್ಧರಿಸಲು ಕಾರಣವೇನು ?

8) ಜಿನನ ಜನನಿ ಎಂದು ಅತ್ತಿಮಬ್ಬೆಯನ್ನು ಕರೆಯಲು ಕಾರಣವೇನು ?

9) ಲೇಖಕರು ಕೆರೆಯ ಬಳಿಗೆ ಹೇಗೆ ಹೋದರು ? ಏಕೆ ?

10) ನವಭಾರತ ಹೇಗೆ ತಬ್ಬಲಿಯಾಯಿತು ?

X. **ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಗುರುತಿಸಿ, ಸಮನ್ವಯಗೊಳಿಸಿ :** 3

"ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು"

XI. **ಈ ಕೆಳಗಿನ ಕವಿ / ಲೇಖಕರಲ್ಲಿ ಯಾರಾದರೂ ನಾಲ್ವರ ಕಾಲ, ಸ್ಥಳ ಮತ್ತು ಒಂದು ಕೃತಿಯನ್ನು ಬರೆಯಿರಿ :** 4 × 3 = 12

1) ತೀ.ನಂ. ಶ್ರೀಕಂಠಯ್ಯ

2) ಬಸವಣ್ಣ

3) ಕೆ.ಎಸ್. ನರಸಿಂಹಸ್ವಾಮಿ

4) ಪಂಪ

5) ಸಿ.ಕೆ. ವೆಂಕಟರಾಮಯ್ಯ

XII. **ಈ ಕೆಳಗಿನ ಗಾದೆ ಮಾತುಗಳಲ್ಲಿ ಯಾವುದಾದರೂ ಎರಡನ್ನು ವಿಸ್ತರಿಸಿ ಬರೆಯಿರಿ :** 2 × 3 = 6

1) ತಾಳಿದವನು ಬಾಳಿಯಾನು

2) ಕಾಯಕವೇ ಕೈಲಾಸ

3) ಮನಸ್ಸಿದ್ದರೆ ಮಾರ್ಗ

XIII. **ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾರೂ ಐದಕ್ಕೆ ಆರೆಂಟು ವಾಕ್ಯಗಳಲ್ಲಿ ಉತ್ತರಿಸಿ :** 5 × 4 = 20

1) ಕಥಾನಾಯಕನು ತನ್ನ ಮನೆ ಬಿಟ್ಟುಹೋದ ಪ್ರಸಂಗವನ್ನು ವಿವರಿಸಿ.

2) ಭರತ ಭೂಮಿಯ ಮಹತ್ವವನ್ನು ಕವಿ ಹೇಗೆ ವರ್ಣಿಸಿದ್ದಾರೆ ?

3) ಹಾಸ್ಟೆಲಿನಲ್ಲಿದ್ದಾಗ ಲೇಖಕರಲ್ಲಿ ಸೋಮಾರಿತನ ಮನೆ ಮಾಡಿದ್ದ ಬಗೆಯನ್ನು ತಿಳಿಸಿ.

4) ಇಂದುಮುಖಿಯರ ಮುಂದೆ ಉತ್ತರನು ತನ್ನ ಪರಾಕ್ರಮವನ್ನು ಹೇಗೆ ವ್ಯಕ್ತಪಡಿಸಿದ್ದಾನೆ ?

5) ಫುಟ್‌ಬಾಲ್ ಕೆಂಪಯ್ಯನವರ ಕ್ರೀಡಾ ಸಾಧನಗಳನ್ನು ತಿಳಿಸಿ.

6) ಹಿಮಾಲಯ ಪರ್ವತ ಕೊಳಕಾಗಲು ಕಾರಣವಾದ ಅಂಶಗಳನ್ನು ವಿವರಿಸಿ.

XIV. **ಈ ಪದ್ಯ ಭಾಗದ ಸಾರಾಂಶವನ್ನು ಬರೆಯಿರಿ :** 4

ಕವಿತೆ ಹುಟ್ಟುವುದು ಬಿಗಿದ ಕೊರಳಿನಲ್ಲಿ
ನಿರಾಶೆಯ ನೆರಳಿನಲ್ಲಿ, ಅಸಹಾಯಕರ ಆಕ್ರಂದನದಲ್ಲಿ
ಇವೆಲ್ಲ ಅಲ್ಲಿ ಇಲ್ಲಿ ಹೆಕ್ಕಿ ಪಟ್ಟಿ ಮಾಡಿದ
ನುಡಿಮುತ್ತುಗಳು. ಹೋದಲ್ಲೆಲ್ಲ ಹಿಂಬಾಲಿಸಿ
ಕಾಡುವ ಮಾತಿನ ಭೂತಗಳು.

XV. **ಈ ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಒಂದನ್ನು ಕುರಿತು ಸುಮಾರು ಹತ್ತು ವಾಕ್ಯಗಳ ಪ್ರಬಂಧವೊಂದನ್ನು ಬರೆಯಿರಿ :** $1 \times 5 = 5$

1) ವರದಕ್ಷಿಣೆ ಒಂದು ಶಾಪ

2) ಶುಚಿತ್ವದ ಪ್ರಾಮುಖ್ಯತೆ

3) ಜನಸಂಖ್ಯಾ ಹೆಚ್ಚಳದಿಂದಾಗುವ ಸಮಸ್ಯೆಗಳು

XVI. ನಿಮ್ಮ ಹುಟ್ಟುಹಬ್ಬದ ಆಚರಣೆಗೆ ಆಹ್ವಾನಿಸಿ ನಿಮ್ಮ ಗೆಳೆಯನಿಗೆ ಒಂದು ಪತ್ರ ಬರೆಯಿರಿ. 5

***ಅಥವಾ***

ನಿಮ್ಮ ಊರಿನ ಹದಗೆಟ್ಟಿರುವ ರಸ್ತೆಗಳನ್ನು ದುರಸ್ತಿ ಮಾಡಿಸುವಂತೆ ಕೋರಿ ನಿಮ್ಮ ಗ್ರಾಮಪಂಚಾಯಿತಿಯ ಅಧ್ಯಕ್ಷರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.